ಈ ರೀತಿ ಒಂದು ಸಂಶಯ ಇತ್ತು. ಈಗ ಟೆಕ್ನಿಕಲಿ ಎಲ್ಲಾ ಕ್ಲಿಯರ್ ಮಾಡಿದ್ದೇವೆ. ಕೃಷ್ಣಾಭಾಗ್ಯ ಜಲ ನಿಗಮದಲ್ಲಿ ಇದನ್ನು ಇಟ್ಟುಕೊಂಡು ಇನ್ನೊಂದು ಲಾಸ್ಟ್ ಮೀಟಿಂಗ್ ಆಗಬೇಕಾಗಿತ್ತು. ನಾವು ಮುಂದಿನ ಮೀಟಿಂಗ್‌ನಲ್ಲಿ ಟೆಂಡರ್ ಕರೆಯುವುದಕ್ಕೆ ಯಾವುದು ಮೋರ್ ಅಡ್ವಾನ್ಟೇಜಸ್ ಇದೆ, ಮೋರ್ ಅಡ್ವಾನ್ಟೇಜಸ್ ಎಂದರೆ ಕಡಿಮೆ ದುಡ್ಡಿನಲ್ಲಿ ಹೆಚ್ಚು ಜನರಿಗೆ ಸಹಾಯವಾಗುವ ಅಡ್ವಾನ್ಟೇಜಸ್ ಪ್ರಪೋಸಲ್ ತೆಗೆದುಕೊಂಡು ಈ ಪ್ರಾಜೆಕ್ಟ್‌ನ್ನು ಶುರುಮಾಡುತ್ತೇವೆ. ಆಲಮಟ್ಟಿ ವಿಚಾರವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಕುರ್‌ಜೋಳ ಅವರಿಗೆ ಎಲ್ಲಾ ಚೆನ್ನಾಗಿ ಗೊತ್ತಿದೆ. ಆದಷ್ಟು ಬೇಗ ಈ ತಿಂಗಳ ಕೊನೆಯ ವೇಳೆಗೆ ನಾವು ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಸೋಮವಾರ ಪೇಟೆ ತಾಲ್ಲೂಕಿನ ವಿದ್ಯುತ್ ಉತ್ಪಾದನಾ ಕೇಂದ್ರ.

368 (2361) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) :— ಮಾನ್ಯ ಇಂಧನ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ಸೋಮವಾರಪೇಟೆ ತಾಲ್ಲೂಕಿನ ಹಾರಂಗಿ ಜಲಾಶಯದಲ್ಲಿ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ನಿರ್ಮಿಸಲಾಗುವುದೇ ಹಾಗಿದ್ದಲ್ಲಿ ಆ ಬಗ್ಗೆ ಯಾವ ಕಂಪನಿಗೆ ಪರವಾನಿಗೆ ಕೊಡಲಾಗಿದೆ.

ಆ) ಅದರಿಂದ ಎಷ್ಟು ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ನಿರೀಕ್ಷೆ ಇದೆ.

ಇ) ಸೋಮವಾರಪೇಟೆಯ ತಾಲ್ಲೂಕು ಶನಿವಾರ ಸಂತೆ ಮತ್ತು ಆಲೂರು, ಸಿದ್ದಾಪುರಗಳಲ್ಲಿ ವಿದ್ಯುತ್ ಘಟಕ ಸ್ಥಾಪನೆ ಮಾಡುವ ಉದ್ದೇಶ ಇದೆಯೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಹೌದು. ಮೆ: ಎನರ್ಜಿ ಡೆವಲಿಪ್‌ಮೆಂಟ್ ಕಂಪೆನಿ ಲಿಮಿಟೆಡ್.

ಆ) ಈ ಕಿರು ಜಲವಿದ್ಯುತ್ ಸ್ಥಾವರದ ಸಾಮರ್ಥ್ಯವು 9 ಮೆಗಾವಾಟ್ ಇದ್ದು ಸುಮಾರು 40 ಮಿಲಿಯನ್ ಯೂನಿಟ್‌ಗಳನ್ನು ಉತ್ಪಾದನೆ ಮಾಡುವ ನಿರೀಕ್ಷೆ ಇದೆ.

ಇ) ಇಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ :— ಮಾನ್ಯ ಅಧ್ಯಕ್ಷರೇ, ಇಲ್ಲಿ ನನ್ನ ಪ್ರಶ್ನೆಗೆ ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ಹಾರಂಗಿಯಲ್ಲಿ ಕಿರು ಜಲವಿದ್ಯುತ್ ಸ್ಥಾವರದಲ್ಲಿ ಸುಮಾರು 9 ಮೆಗಾವ್ಯಾಟನಷ್ಟು ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತೇವೆಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಈ 9 ಮೆಗಾವ್ಯಾಟ್ ವಿದ್ಯುತ್‌ನ್ನು ಕೊಡಗಿಗೆ ಕೊಡುತ್ತೀರಾ

ಅಥವಾ ಬೇರೆ ಕಡೆಗೇನಾದರೂ ಷಿಫ್ಟ್ ಮಾಡುತ್ತೀರಾ? ಇದು ಸ್ವಂತ ಉಪಯೋಗಕ್ಕಾಗಿ ಹೋಗುತ್ತಾ ಎನ್ನುವ ಬಗ್ಗೆ ಉತ್ತರವನ್ನು ಕೊಡಬೇಕು. ಅದರ ಜೊತೆಗೆ ನಾನು ಶನಿವಾರಸಂತೆ ಮತ್ತು ಅಲೂರು ಸಿದ್ಧಾಪುರದಲ್ಲಿ ಪವರ್ ಸ್ಟೇಷನ್ ಒಂದನ್ನು ತೆರೆಯುತ್ತೀರಾ ಎಂದು ಕೇಳಿದ್ದಕ್ಕೆ ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ. ಕಳೆದ ಸಾರಿ ವಿಧಾನಸಭೆಯಲ್ಲಿ ಉತ್ತರ ಕೊಡುವ ಸಂದರ್ಭದಲ್ಲಿ 66 ಕೆ.ವಿ ಸ್ಟೇಷನ್‌ನ್ನು ಶನಿವಾರಸಂತೆಯಲ್ಲಿ 33 ಕೆ.ವಿ ಸ್ಟೇಷನ್ ಅನ್ನು ಅಲೂರು, ಸಿದ್ಧಾಪುರದಲ್ಲಿ ತೆರೆಯುತ್ತೇವೆ ಎಂದು ಹೇಳಿದ್ದೀರಿ. ಹೀಗೇಕೆ ಈ ರೀತಿ ಉತ್ತರ ಬಂತು? ದಯವಿಟ್ಟು ಇದಕ್ಕೆ ನಿರ್ದಿಷ್ಟವಾದ ಉತ್ತರವನ್ನು ಹೇಳಬೇಕು.

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ಸಚಿವರು) :— ಮಾನ್ಯ ಅಧ್ಯಕ್ಷರೇ, ಮೊದಲು ಕೇಳಿರುವ ಪ್ರಶ್ನೆಗೆ ಹಾರಂಗಿಯಲ್ಲಿ ಸುಮಾರು 9 ಮೆಗಾವ್ಯಾಟ್ ವಿದ್ಯುತ್‌ನ್ನು ನಾವು ಉತ್ಪಾದನೆ ಮಾಡುತ್ತೇವೆ. ಅದು ಮುಂದಿನ ತಿಂಗಳು ಕೆಲಸ ಕೂಡ ಪ್ರಾರಂಭವಾಗುತ್ತದೆ. ವಿದ್ಯುತ್ ಅಲ್ಲಿರುವ ಸಬ್ ಸ್ಟೇಷನ್ ಮುಖಾಂತರವೇ ಹಾದು ಹೋಗಬೇಕಾಗುತ್ತದೆ. ಅಲ್ಲಿರುವ ಸಬ್ ಸ್ಟೇಷನ್‌ಗೆ ನಾವು ಪವರ್ ಕೊಡುತ್ತೇವೆ. ಪವರ್ ಕೊಡುವ ಸಂದರ್ಭದಲ್ಲಿ ನಾವು ಎಲ್ಲಿ ಜನರೇಟರ್ ಹಾಕುತ್ತೇವೋ ಅಲ್ಲಿಯೇ ಕೊಡಬೇಕೆಂದಿಲ್ಲ. ನಮ್ಮ ರಾಜ್ಯದ ಸಮಸ್ಯೆ ಬಹಳಷ್ಟು ಕಡೆ ಇರುವುದರಿಂದ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಬರುತ್ತದೋ ಅದನ್ನು ನಾವು ರಾಜ್ಯದ ಎಲ್ಲಾ ಜಿಲ್ಲೆ, ತಾಲ್ಲೂಕುಗಳಿಗೆ ಹಂಚಬೇಕಾಗುತ್ತದೆ. ಎರಡನೇ ಪ್ರಶ್ನೆ, ಶನಿವಾರಸಂತೆ ಮತ್ತು ಅಲೂರಿನಲ್ಲಿ ಪವರ್ ಪ್ಲಾಂಟ್ ಹಾಕುತ್ತೀರಾ ಎಂದು ಕೇಳಿದ್ದಾರೆ. ಅಲ್ಲಿ ಪವರ್ ಪ್ಲಾಂಟ್ ಸಧ್ಯಕ್ಕೆ ಹಾಕುವ ಪರಿಸ್ಥಿತಿ ಇಲ್ಲ ಎಂದು ಹೇಳಿದ್ದೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ :— ಅಲ್ಲಿ ವಿದ್ಯುತ್ ಘಟಕ ಸ್ಥಾಪನೆ ಮಾಡುತ್ತೀರಾ ಎಂದು ಕೇಳಿದ್ದೇನೆ - ಪವರ್ ಸ್ಟೇಷನ್.

ಶ್ರೀ ಶರಣಬಸಪ್ಪ ದರ್ಶನಾಪುರ :— ವಿದ್ಯುತ್ ಘಟಕ ಎಂದರೆ ಇದೇ ಬರುತ್ತದೆ.

ಅಧ್ಯಕ್ಷರು :— ಅವರು ಕನ್‌ಫ್ಯೂಸ್ ಆಗಿದ್ದಾರೆ. ಅಲ್ಲೂ ಏನಾದರೂ ಮಿನಿ ಹೈಡಲ್ ಪ್ರಾಜೆಕ್ಟ್ ಮಾಡುತ್ತೀರಾ ಎನ್ನುತ್ತಿದ್ದಾರೆ.

ಶ್ರೀ ಶರಣಬಸಪ್ಪ ದರ್ಶನಾಪುರ :— ಇಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ :— ಪವರ್ ಸ್ಟೇಷನ್ ಓಪನ್ ಮಾಡುತ್ತೀರಾ ಎಂದು ಕೇಳಿದ್ದೇನೆ.

ಅಧ್ಯಕ್ಷರು :— ಇವರು ಪವರ್ ಪ್ರೊಡಕ್ಷನ್‌ನಿಂದ ಸ್ಟೇಷನ್‌ಗೆ ಬಂದುಬಿಟ್ಟರು.

ಶ್ರೀ ಶರಣಬಸಪ್ಪ ದರ್ಶನಾಪುರ :— ಅಲ್ಲಿ ಉಪಕೇಂದ್ರ ಎಂದರೆ ನಾವು ಉತ್ತರವನ್ನು ಕೊಡುತ್ತೇವೆ; ಇಲ್ಲಿ ಪವರ್ ಸ್ಟೇಷನ್ ಎಂತಲೇ ಬಂದಿದೆ. ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಎಂ.ಸಿ. ಅಪ್ಪಚ್ಚು ರಂಜನ್ :— ಮಾನ್ಯ ಅಧ್ಯಕ್ಷರೆ, ಶನಿವಾರ ಸಂತೆಯಲ್ಲಿ ನಾವು ಈಗಾಗಲೇ ಜಾಗವನ್ನೂ ಸಹ ಕೊಟ್ಟಿದ್ದೇವೆ. ಅದರ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ :— ಮಾನ್ಯ ಸದಸ್ಯರಿಗೆ ಉತ್ತರವನ್ನು ತಿಳಿಸಿಕೊಡುತ್ತೇನೆ.

ಪ್ರಶ್ನೆ 369(2409)

ಅಧ್ಯಕ್ಷರು :— ಮಾನ್ಯ ಜಯಣ್ಣನವರೇ, ತಮ್ಮ ಪ್ರಶ್ನೆಯನ್ನು ತಡೆಹಿಡಿದ್ದೇವೆ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೇ, ಅವರಿಗೆ ಏನಾದರೂ ಉತ್ತರ ಇಮ್ಮೀಡಿಯೇಟ್ ಆಗಿ ಬೇಕಾಗಿದ್ದರೆ ಟ್ರಿಬ್ಯೂನಲ್ ಮ್ಯಾಟರನ್ನು ಟಚ್ ಮಾಡದಿದ್ದರೆ ಮತ್ತು ಅವರಿಗೆ ಇಮ್ಮೀಡಿಯೇಟ್ ಆಗಿ ರಿಲೀಫ್ ಏನಾದರೂ ಬೇಕಾಗಿದ್ದರೆ ನಾನು ಉತ್ತರವನ್ನು ಈಗಲೇ ಹೇಳುತ್ತೇನೆ. ಇದು ಕಾಂಪ್ರೆಹೆನ್ಸೀವ್ ಪ್ರಾಜೆಕ್ಟ್. 1100 ಪೋಸ್ಟ್ ಕಬಿನಿ ಪ್ರಾಜೆಕ್ಟ್. ಅವರ ಕ್ಷೇತ್ರಕ್ಕೆ ಏನಾದರೂ ಬೇಕು ಎಂದರೆ ಕೇಳಲಿ. ಟ್ರಿಬ್ಯೂನಲ್ ವಿಚಾರವನ್ನು ಟಚ್ ಮಾಡುವುದು ಮಾತ್ರ ಬೇಡ.

ಅಧ್ಯಕ್ಷರು :— ಈ ಪ್ರಶ್ನೆಗೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ನಾವು ಈ ಸದನದಲ್ಲಿ ಹೊರಗೆಡವಿದರೆ ಇದು ಟ್ರಿಬ್ಯೂನಲ್ ಮುಂದೆ ಇರುವುದರಿಂದ ರಾಜ್ಯ ಮುಂದೆ ನಡೆಸುತ್ತಿರುವ ದಾವೆಗೆ ಸ್ವಲ್ಪ ತೊಂದರೆಯಾಗಬಹುದು. ರಾಜ್ಯದ ಹಿತದೃಷ್ಟಿಯಿಂದ ಕೆಲವು ಅಂಶಗಳನ್ನು ಹೊರಗೆಡವಲು ಆಗುವುದಿಲ್ಲ. ನಿಮ್ಮ ಕ್ಷೇತ್ರದ ಹಿತದೃಷ್ಟಿಯಿಂದ ಸಂಕ್ಷಿಪ್ತವಾಗಿ ಏನಾದರೂ ಕೇಳುವುದಿದ್ದರೆ ಕೇಳಿ. ನಾನು ಏನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ you can meet the Hon. Minister and take all the information from him. ದಯಮಾಡಿ ಸಹಕರಿಸಿ.

ಶ್ರೀ ಎಸ್. ಜಯಣ್ಣ :— ಆಗಬಹುದು ಅಧ್ಯಕ್ಷರೇ.

ಕರಾವಳಿ ಕ್ಷೇತ್ರದಲ್ಲಿ ಕಡಲ ಕೊರೆತ.

370(2332) ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.